**ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯಃ ಬೇಲೂರು**

**ಃಸಿಸಿ ಸಂಖ್ಯೆಃ 68/2020**

**ಫಿರ್ಯಾದುದಾರರು** ಃ ರಾಜ್ಯ ಸರ್ಕಾರದ ಪರವಾಗಿ
ಅಬಕಾರಿ ಇಲಾಖೆ.

**ವಿರುದ್ಧ**

**ಆರೋಪಿಃಗಳು**

ಶ್ರೀಮತಿ ರೇಣುಕಾ ಕೋಂ ಕೇಶವಮೂರ್ತಿ,
40 ವರ್ಷ,
ವಾಸಃ- ವಾಗಿನಕೆರೆ ಗ್ರಾಮ,
ಕಸಬಾ ಹೋಬಳಿ,
ಬೇಲೂರು ತಾಲ್ಲೂಕು.

- - -

**ಃದೋಷಾರೋಪಣೆಃ**

ಶ್ರೀ ನಾಗೇಂದ್ರ **ಬಿ.ಎ., ಎಲ್‌ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಬೇಲೂರು ಆದ ನಾನು ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆಃ-**

ದಿನಾಂಕ **03.02.2019** ರಂದು ರಾತ್ರಿ **09.30** ಗಂಟೆ ಸಮಯದಲ್ಲಿ ಬೇಲೂರು ತಾಲ್ಲೂಕು, ಕಸಬಾ ಹೋಬಳಿ, ವಾಗಿನಕೆರೆ ಗ್ರಾಮದ ಆರೋಪಿಯಾದ ನೀವು ನಿಮ್ಮ ವಾಸದ ಮನೆಗೆ ಹೊಂದಿಕೊಂಡಿರುವ ಬಚ್ಚಲು ಮನೆಯಲ್ಲಿ **02** ಲೀ. ಕಳ್ಳಭಟ್ಟಿ ಸಾರಾಯಿ ಮತ್ತು ಕಳ್ಳಭಟ್ಟಿ ಸಾರಾಯಿ ತಯಾರಿಸಲು ಬಳಸುವ **20** ಲೀ. ಬೆಲ್ಲದ ಕೊಳೆಯನ್ನು ಅಕ್ರಮವಾಗಿ ಯಾವುದೇ ಪರವಾನಗಿಯನ್ನು ಹೊಂದದೇ ನಿಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡಿರುತ್ತೀರಿ, ಅದರನ್ವಯ **ಕರ್ನಾಟಕ** ಅಬಕಾರಿ **ಕಾಯ್ದೆ ಕಲಂ.13(1)(ಎ)** ಸಹಕಲಂ **32(1) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ** ಎಸಗಿರುತ್ತೀರಿ?

**ಎರಡನೇಯದಾಗಿ** ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಸದರಿ ಮನೆಯ ಮಾಲೀಕರಾಗಿದ್ದು, ಸದರಿ ಮನೆಗೆ ಹೊಂದಿಕೊಂಡಿರುವ ಬಚ್ಚಲು ಮನೆಯಲ್ಲಿ **02** ಲೀ. ಕಳ್ಳಭಟ್ಟಿ ಸಾರಾಯಿ ಮತ್ತು ಕಳ್ಳಭಟ್ಟಿ ಸಾರಾಯಿ ತಯಾರಿಸಲು ಬಳಸುವ **20** ಲೀ. ಬೆಲ್ಲದ ಕೊಳೆಯನ್ನು ಅಕ್ರಮವಾಗಿ ಯಾವುದೇ ಪರವಾನಗಿಯನ್ನು ಹೊಂದದೇ ನಿಮ್ಮ ಸ್ವಾಧೀನದಲ್ಲಿ

ಇಟ್ಟುಕೊಂಡು ಸ್ಥಳಾವಕಾಶ ಕಲ್ಪಿಸಿಕೊಂಡಿರುತ್ತಿರುತ್ತೀರಿ, **ಅದರನ್ವಯ ಕರ್ನಾಟಕ** ಅಬಕಾರಿ **ಕಾಯ್ದೆ ಕಲಂ.38(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ?**

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು **ಮಾನವ ಜೀವಕ್ಕೆ ಹಾನಿಕರವಾದ ಕಲಬೆರಿಕೆ** ಪಾನೀಯವಾದ **02** ಲೀ. ಕಳ್ಳಭಟ್ಟಿ ಸಾರಾಯಿ ಮತ್ತು ಕಳ್ಳಭಟ್ಟಿ ಸಾರಾಯಿ ತಾಯಾರಿಸಲು ಬಳಸುವ **20** ಲೀ. ಬೆಲ್ಲದ ಕೊಳೆಯನ್ನು ಅಕ್ರಮವಾಗಿ ಸ್ವಾಧೀನ ಹೊಂದಿರುತ್ತೀರಿ, ಅದರನ್ವಯ **ಭಾರತೀಯ ದಂಡ ಸಂಹಿತೆ ಕಲಂ.272 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ?**

ಮೇಲ್ಕಂಡ ಆರೋಪಿಗೆ **ದೋಷಾರೋಪಣೆಯ ಸಾರಾಂಶವನ್ನು ಅವರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.**

**ಸ್ಥಳ: ಬೇಲೂರು**
**ದಿನಾಂಕ: 04.12.2025**

(ಶ್ರೀ ನಾಗೇಂದ್ರ)
**ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ.ಎಂ.ಎಫ್.ಸಿ., ಬೇಲೂರು**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ: ಬೇಲೂರು**

**ಸಿಸಿ ಸಂಖ್ಯೆ: 68/2020**

ಆರೋಪಿಯ ಹೆಸರು : ಶ್ರೀಮತಿ ರೇಣುಕಾ
ತಂದೆ/**ಗಂಡನ ಹೆಸರು** : ಕೋಂ ಕೇಶವಮೂರ್ತಿ
**ವಯಸ್ಸು** : **40** ವರ್ಷ
**ವಾಸ ಸ್ಥಳ** : ವಾಗಿನಕೆರೆ ಗ್ರಾಮ,
ಕಸಬಾ ಹೋಬಳಿ,
ಬೇಲೂರು ತಾಲ್ಲೂಕು.

ಪ್ರಶ್ನೆ:1 ನಾನು ತಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರ:

ಪ್ರಶ್ನೆ:2 ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?
ಉತ್ತರ:

ಮೇಲ್ಕಂಡ ಆರೋಪಿಯ ಪರೀಕ್ಷೆಯನ್ನು ನನ್ನ ಸಮಕ್ಷಮ ಮತ್ತು ವೈಯಕ್ತಿಕ ಹೇಳಿಕೆ ಮೇಲೆ ಮಾಡಿಕೊಂಡಿದ್ದು ಮತ್ತು ದಾಖಲಾತಿಯ ಸಂಪೂರ್ಣ ಮತ್ತು ಸತ್ಯವಾದ ಆರೋಪಿಯ ಹೇಳಿಕೆಯನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ದೃಡೀಕರಿಸುತ್ತೇನೆ.

ಸ್ಥಳ: ಬೇಲೂರು
ದಿನಾಂಕ: **04.12.2025**

(ಶ್ರೀ ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
**ಜೆ.ಎಂ.ಎಫ್.ಸಿ., ಬೇಲೂರು**